ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವೀ ಅರ್ಜೀ ನಂಬರ್ 6—1.

ಮೃತಪಟ್ಟ ವೆಂಕಟರಾಮಯ್ಯ—ರಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನಾರಣಯ್ಯ—ರಾಮಚಂದ್ರಯ್ಯ, ಮೃತಪಟ್ಟ ಸದರೀ ವೆಂಕಟರಾಮಯ್ಯ—ರಾಮಯ್ಯನಿಗೆ ವೆಂಕಟರಾಮಯ್ಯ ತಂದೆ ಮತ್ತು ರಾಮಯ್ಯನು ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ತಾ॥ ಬೊತ್ತಗಾನಹಳ್ಳಿ ಸ್ಥಳದ ನಾರಣಯ್ಯ ರಾಮಚಂದ್ರಯ್ಯನು ಡಿಟೋ ಗ್ರಾಮ ವಾಸಸ್ಥನಾಗಿ ಮೃತಪಟ್ಟ ವೆಂಕಟರಾಮಯ್ಯ—ರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 1980 ರೂ ಪಾಯಿನ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿ ಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಣಯ್ಯ ರಾಮಚಂದ್ರಯ್ಯನ ಅರ್ಜೀಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕರಾಮಯ್ಯ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಜನವರೀ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ತಪ್ಪು ದುರಸ್ತು.

1884ನೇ ಜನವರೀ 19—26ನೇ ತಾರೀಖಿನವೈಸೂರು ಗೆಜಟಿನ 2ನೇ ಭಾಗದ 20—25ನೇ ಪುಟಗಳಲ್ಲಿ ಪಾಯಿಷ್ ಮಾಡಿರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ 4ನೇ ಜನವರೀ ಮರ್ತುಂವುಳ್ಳ ಇಸ್ತಿಹಾರ್‌ನಾಮೆಯ 2ನೇ ಪ್ಯಾರಾದಲ್ಲಿ "ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು" ಯೆಂಬದಕ್ಕೆ ಬದಲಾಗಿ "ತೆಗದುಕೊಳ್ಳಲ್ಪಡಲಾರದು" ಯಂತಾ ಓದಿಕೊಳ್ಳತಕ್ಕದ್ದು. ಮತ್ತು ಸದರೀ ಗೆಜಟಿನ 21—26ನೇ ಪುಟದಲ್ಲಿ ಪಾಯಿಷ್ ಮಾಡಲ್ಪಟ್ಟ ಅದೇ ಇಸ್ತಿಹಾರ್‌ನಾಮೆಯ 12ನೇ ಪ್ಯಾರಾದಲ್ಲಿ "ಕೊಡಲ್ಪಡಬಹುದು" ಯಂಬದಕ್ಕೆ ಬದಲಾಗಿ "ಕೊಡಲ್ಪಡಕೂಡದು" ಯೆಂದು ಓದಿಕೊಳ್ಳತಕ್ಕದ್ದು.

1883ನೇ ಇಸವಿ ಡಿಶಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ.—ಹೆಡ್ ಕ್ವಾರ್ಟರ್‌ಗಳಲ್ಲಿ 2 ಅಂಗುಲವು, 35 ಸೆಂಟ್ಸ್ ಮಳೆ ಆಗಿಯಲ್ಪಟ್ಟಿತು.

ಫಸಲ್.—ಬಳೆಯಲ್ಲಿರತಕ್ಕ ಫಸಲ್‌ಗಳು ಒಳ್ಳೇ ಸ್ಥಿತಿಯಲ್ಲಿರುವದಾಗಿ ರಿಪೋರ್ಟಾಗಿರುತ್ತೆ. ಹಾರಕ, ಎಳ್ಳು ಮತ್ತು ಭತ್ತ, ಕೆಲವು ಸ್ಥಳಗಳಲ್ಲಿ ರಾಗಿ ಮತ್ತು ಹುರಳಿ ಕಟುವಾದವು. ಯಾವ ಧಾನ್ಯವೂ ಪೇರಾವಾಗಲಿಲ್ಲ.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿದೆ. ಖರ್ಕಾರ್‌ಹಳ್ಳಿ, ಕ್ಯೋಸ್‌ಪೇಟೆ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಜ್ವರವು ವ್ಯಾಪಿಸಿತ್ತು.

ಜರ್ಜಾವಾರ್‌ಗಳು.—ಕೆಲವು ಭಾಗಗಳಲ್ಲಿ ಗೋಮಾರಿ ರೋಗವು ಸ್ವಲ್ಪ ಮಟ್ಟಿಗೆ ಪುಂಟಾಗಿತ್ತು. ಯೆಲ್ಲಾ ಕಾರಣಗಳಿಂದಲೂ 1,907 ಕಾಲ್ನಡಿಗಳು ಮೃತಪಟ್ಟವು, ಇವುಗಳ ಪೈಕೀ 195 ದುಷ್ಟ ಮೃಗಗಳಿಂದ ಕೊಲ್ಲಲ್ಪಟ್ಟವು.

ಜನಮರಣ— ನವಂಬರ್ ಮಾಹೆಯಲ್ಲಿ 689 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 607 ಮಂದಿಯೂ ಮೃತಪಟ್ಟರು. ಹೊಕಾಬಿಲಾ 82 ಜಾಸ್ತಿ.

ಜರ್ಮಿಗಳು—815—12—9 ರೂಪಾಯಿಗಳ ಕಂದಾಯವುಳ್ಳ ಜರ್ಮಿಗಳು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವೆ. ರಾಜೀನಾ ಮೆ ಯಾವದು ಇಲ್ಲ.

ಎ. ಹೆಚ್. ಮೆಕ್ಕೆಂಟ್ಯೆರ್,
ಡೆಪ್ಯೂಟಿ ಕಮ್ಮಿಷನರ್.